**ದಿನಾಂಕಃ10.11.2021 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ–**

ಪೊಲೀಸ್‌ರು ನಿಪಿ–2 ರ ಮೂಲಕ ವಶಪಡಿಸಿಕೊಂಡ ಬೀಗವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬೀಗದ ಕಾಯಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಬೀಗದ ಕಾಯಿಯ ಮೇಲೆ ಯಾವುದೋ ಬಲವಾದ ವಸ್ತುವಿನಿಂದ ಮೀಟಿರುವ ಗುರುತನ್ನು ತೋರಿಸುತ್ತಾರೆ. ಸದರಿ ಬೀಗದ ಕಾಯಿಯನ್ನು **ಮು.ಮಾ–1** ಎಂದು ಗುರುತಿಸಲಾಯಿತು.

ಈ ಹಿಂದೆ ಕಳುವಾದ ಆಭರಣಗಳನ್ನು ಹಿರಿಯೂರು ವೃತ್ತ ನಿರೀಕ್ಷಕರವರ ಕಛೇರಿಯಿಂದ ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರದಲ್ಲಿರುವ ಆಭರಣಗಳ ಚಿತ್ರಗಳನ್ನು ನೋಡಿ ಗುರುತಿಸುತ್ತಾರೆ. ಅದನ್ನು **ನಿಪಿ–4** ಎಂದು ಗುರುತಿಸಲಾಯಿತು. ನಾನು 4 ಬಂಗಾರದ ಆಭರಣಗಳನ್ನು ಪೊಲೀಸ್‌ರಿಂದ ನಿಪಿ–4 ರಂತೆ ಪಡೆದುಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿ ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಭದ್ರತಾ ಮುಚ್ಚಳಿಕೆಯಾಗಿರುತ್ತದೆ. ಅದನ್ನು **ನಿಪಿ–5** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–5(ಎ)** ಎಂದು ಗುರುತಿಸಲಾಯಿತು. ಸದರಿ ನಿಪಿ–5 ನ್ನು ನಿಪಿ–4 ರಲ್ಲಿರುವ ಆಭರಣಗಳನ್ನು ತನಿಖಾಧಿಕಾರಿಯಿಂದ ಪಡೆಯುವಾಗ ಬರೆದುಕೊಟ್ಟಿರುತ್ತೇನೆ. ನಾನು ದೂರು ದಾಖಲಿಸಿ ಒಂದು ವರ್ಷದ ನಂತರ ಪೊಲೀಸ್‌ರು ಒಬ್ಬ ಕಳ್ಳನನ್ನು ಕರೆದುಕೊಂಡು ಬಂದಿದ್ದರು. ಸದರಿ ಆಸಾಮಿ ತಾನು ಇದೇ ಮನೆಯಲ್ಲಿ ಕಳುವು ಮಾಡಿರುತ್ತೇನೆಂದು ಹೇಳಿದ. ಸದರಿ ಆಸಾಮಿಯ ಹೆಸರು ಧನಂಜಯ ಎಂದು ಗೊತ್ತಾಯಿತು. ನಾನು ಪೊಲೀಸ್‌ರು ನಮ್ಮ ಮನೆಗೆ

ಕರೆದುಕೊಂಡು ಬಂದ ಆಸಾಮಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸುತ್ತಾರೆ.

**ಪಾಟೀ-ಸವಾಲುಃ ಆರೋಪಿ ಪರ ಶ್ರೀ ಸಿ.ಕೆ. ವಕೀಲರು ಈ ಪ್ರಕರಣದಿಂದ ನಿವೃತ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.**

**ಆರೋಪಿಗೆ ಪಾಟೀ-ಸವಾಲು ಮಾಡಲು ತಿಳಿಸಲಾಗಿ, ಆರೋಪಿಯು ತನಗೆ ತಾಲೂಕು ಕಾನೂನು ಸೇವಾ ಸಮಿತಿಯಿಂದ ವಕೀಲರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತಾನೆ. ನ್ಯಾಯದಾನದ ದೃಷ್ಠಿಯಿಂದ ಪಾಟೀ-ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕೈತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.